

# ಸೌಂದರ್ಯದ ಖನಿ ಡಾನ್!

■ ಚಿತ್ರ– ಲೇಖನ:
ರಾಮಪ್ರಸಾದ ಬಿ.

ಗೃಹಾಲಂಕಾರದ ಸೊಬಗನ್ನು ಹೆಚ್ಚಿಸುವ ನೀಲಿಬಣ್ಣದ ಈ ಹೂವು ಪ್ಲಾಂಟೇ ಸಾಮ್ರಾಜ್ಯದ ಕನ್‌ವೊಲ್‌ವುಲೇಷಿಯೇ ಕುಟುಂಬಕ್ಕೆ ಸೇರುವ ಇಪೋಮಿಯ ಸಂಕುಲದ ಸಸ್ಯಜಾತಿ. ಇದನ್ನು 'ಇಪೋಮಿಯ ಇಂಡಿಕಾ' ಎಂಬ ಹೆಸರಿನಿಂದ ಗುರತಿಸುತ್ತಾರೆ.

ಬ್ಲೂಡಾನ್ ಫ್ಲವರ್, ಓಷಿಯನ್ ಬ್ಲೂ ಮಾರ್ನಿಂಗ್ ಗ್ಲೋರಿ, ಐಲೆಂಡ್ ಮಾರ್ನಿಂಗ್ ಗ್ಲೋರಿ, ಪರ್ ಪರ್ ವಿಂಡೇ, ಕೋ ಅಲಿ ಅವಾ ಮುಂತಾದ ಹೆಸರುಗಳಿಂದಲೂ ಕರೆಸಿಕೊಳ್ಳುವ ಈ ಸಸ್ಯ ಜಗತ್ತಿನಾದ್ಯಂತ ಉಷ್ಣವಲಯದ ಆವಾಸಗಳಲ್ಲಿ ಯಥೇಚ್ಛವಾಗಿ ಬೆಳೆಯುತ್ತದೆ.

ಹೃದಯಾಕಾರದ ಮೂರು ಭಾಗಗಳನ್ನು ಹೊಂದಿದ ಕಡು ಹಸಿರು ಬಣ್ಣದ ಎಲೆಗಳನ್ನು ಹೊಂದಿದ್ದು ಎಂಟು ಸೆಂಟಿಮೀಟರ್ ಅಗಲದಷ್ಟಿರುವ ನೀಲಿ ಬಣ್ಣದ ಪಕಳೆಯುಳ್ಳ ಹೂಗಳನ್ನು ಬಿಡುತ್ತದೆ. ಹಿಂಬದಿ ಗುಲಾಬಿ ಬಣ್ಣವನ್ನು ಹೊಂದಿರುತ್ತದೆ. ವಸಂತ ಋತುವಿನಿಂದ ಶರತ್ಕಾಲದವರೆಗೆ ಹೂ ಬಿಡುವ ಈ ಸಸ್ಯವು 7 ಡಿಗ್ರಿ ಸೆಂ.ಗಿಂತ ಕಡಿಮೆ ತಾಪಮಾನದಲ್ಲಿ ಜೀವಿಸಲಾರದು. ಇದರ ಹೆಸರಿನೊಂದಿಗೆ ಬೆಸೆದಿರುವ ಇಂಡಿಕಾ ಎಂಬುದು ಭಾರತದ ಅಥವಾ ಪೂರ್ವ ಇಂಡೀಸ್ ಅಥವಾ ಚೀನಾ ಮೂಲದ ಸಸ್ಯವೆಂದು ಸೂಚಿಸುತ್ತದೆ.

ಕೈತೋಟಗಳ ಅಲಂಕಾರಕ್ಕೆ ಬೆಳೆಸುವ ಕಾರಣ 'ರಾಯಲ್ ಹಾರ್ಟಿಕಲ್ಚರ್ ಸೊಸೈಟಿ'ಯ ಪ್ರಶಸ್ತಿಗೂ ಭಾಜನವಾಗಿದೆ. ಆಸ್ಟ್ರೇಲಿಯಾ, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ, ಕ್ಯಾಲಿಫೋರ್ನಿಯಾ, ಪೋರ್ಚುಗಲ್‌ಗಳಲ್ಲಿ ಇದನ್ನು ಕಳೆ ಎಂದು ಪರಿಗಣಿಸಲಾಗಿದೆ. ನ್ಯೂಜಿಲೆಂಡ್‌ನಲ್ಲಿ ಅನುಪಯುಕ್ತವೆಂದು ಭಾವಿಸಿ ನಿಷೇಧಿಸಲಾಗಿದೆ. ಇದರ ಉಪಜಾತಿಯ ಹೂಗಳು ಬೇರೆ ಬಣ್ಣಗಳಲ್ಲಿಯೂ ಕಾಣಸಿಗುತ್ತವೆ. ಸೂರ್ಯರಶ್ಮಿಯಲ್ಲಿ ನೀಲಿ ಬಣ್ಣದಲ್ಲಿರುವ ಹೂಗಳು ತಂಪಾದ ಸಮಯದಲ್ಲಿ ಬಾಡಿ ಗುಲಾಬಿ ಬಣ್ಣಕ್ಕೆ ತಿರುಗುತ್ತವೆ. ಬೀಜಗಳ ಸುಳಿವಿರದೆ, ಗಿಡದ ಕಾಂಡವನ್ನು ಕತ್ತರಿಸಿ ಬೆಳೆಸುವ ಮೂಲಕ ಹೊಸ ಸಸ್ಯವನ್ನು ಬೆಳೆಸಬಹುದಾಗಿದೆ.

